ಇ) ಬೆಳಗಾಂವ್ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ 1992–93ನೇ ಸಾಲಿನಲ್ಲಿ 87 ಕಿ.ಮೀ. ಡಾಂಬರೀಕರಣ ಮಾಡಲು ಯೋಚಿಸಿದ್ದು ಇಲ್ಲಿಯವರೆಗೆ 37.90ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆ.

ಈ) ಸಕಾಲದಲ್ಲಿ ಡಾಂಬರು ಲಭ್ಯವಾಗದಿದ್ದುದ್ದರಿಂದಲೂ ಹಾಗೂ ಸಗಟು ಡಾಂಬರನ್ನು ಶೇಖರಿಸಿಕೊಳ್ಳಲು ವ್ಯವಸ್ಥೆ ಇಲ್ಲದಿರುವುದರಿಂದಲೂ, ಡಾಂಬರೀಕರಣದ ನಿರ್ದಿಷ್ಟ ಗುರಿಯನ್ನು ಸಾಧಿಸಿರುವುದಿಲ್ಲ.

ಉ) ಆವಶ್ಯವಿರುವ ಡಾಂಬರನ್ನು ಡ್ರಮ್ಮುಗಳಲ್ಲಿ ಪಡೆಯಲು ಜಿಲ್ಲಾ ಪರಿಷತ್ತಿನವರಿಂದ ಪ್ರಯತ್ನ ಮಾಡಲಾಗುತ್ತಿದೆ. ಸಗಟು ಡಾಂಬರನ್ನು ಶೇಖರಿಸಲು ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಊ) ಡಾಂಬರೀಕರಣ ಕೆಲಸ ಮಾಡಲು ಈ ಕೆಳಗೆ ನಮೂದಿಸಿದ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ ಹಾಗೂ ಕೆಲವು ಡಾಂಬರೀಕರಣ ಕಾಮಗಾರಿಗಳನ್ನು ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿದೆ.

1. ಶ್ರೀ ಎಂ.ಎಸ್. ಸಂಕನಗೌಡಶಾನಿ – ಹುಬ್ಬಳ್ಳಿ
2. ಶ್ರೀ ಬಿ.ಎಸ್. ವಾಲಿ – ಗದಗ
3. ಶ್ರೀ ಎನ್.ಎಂ. ಮುಗಳಿ – ಎಲಿವಾಳ

ರಾಜ್ಯದಲ್ಲಿರುವ ಜಲಾನಯನ ಪ್ರದೇಶಗಳಿಂದ ನೀರಾವರಿಯಾದ ಜಮೀನಿನ ವಿಸ್ತೀರ್ಣ

135 (306) ಶ್ರೀ ಜಿ. ರಾಜುಗೌಡ (ಹನೂರು):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಜಲಾನಯನ ಪ್ರದೇಶಗಳಿವೆ;

ಆ) ಯಾವ ಯಾವ ಜಲಾನಯನಗಳಿಂದ ಈಗ ಎಷ್ಟು ಟಿ.ಎಂ.ಸಿ. ನೀರು ದೊರೆಯುತ್ತದೆ;

ಇ) ಇದರಿಂದ ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ.

ಈ) ಎಲ್ಲಾ ಯೋಜನೆಗಳು ಪೂರ್ಣವಾಗಿ ಕಾರ್ಯಗತಗೊಂಡಲ್ಲಿ ರಾಜ್ಯಕ್ಕೆ ದೊರೆಯುವ ನೀರಿನ ಪ್ರಮಾಣ ಎಷ್ಟು;

ಉ) ಇದಕ್ಕೆ ಬೇಕಾಗುವ ಕಾಲ, ಹಣದ ಜಲ ಸಂಪನ್ಮೂಲಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ), ಆ), ಇ), ಈ) ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಉ) ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗುವ ಕಾಲ ರಾಜ್ಯದ ಸಂಪನ್ಮೂಲವನ್ನವಲಂಬಿಸಿರುತ್ತದೆ. ಈ ಯೋಜನೆಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

ಅನುಬಂಧ

(ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 306)

ಕರ್ನಾಟಕದ ಜಲಾನಯನ ಪ್ರದೇಶಗಳು ಮತ್ತು ಇವುಗಳಿಂದ ಉಪಯೋಗಿಸಿಕೊಳ್ಳುವ ನೀರಿನ ಪ್ರಮಾಣದ ವಿವರಗಳು

ಕ್ರ. ಸಂ.	ಜಲಾನಯನ	ಸರಾಸರಿ ವಾರ್ಷಿಕ ಜಲ ಸಂಪತ್ತು (ಟಿ.ಎಂ.ಸಿ.ಗಳಲ್ಲಿ)	ನೀರಾವರಿಗೆ ನಿಗದಿಪಡಿಸಿರುವ ನೀರಿನ ಪ್ರಮಾಣ (ಟಿ.ಎಂ.ಸಿ.ಗಳಲ್ಲಿ)	ಇದುವರೆಗೆ ಉಪಯೋಗಿಸಿಕೊಳ್ಳಲಾಗುತ್ತಿರುವ ನೀರು (ಟಿ.ಎಂ.ಸಿ.ಗಳಲ್ಲಿ)	ಇದುವರೆಗೆ ನೀರಾವರಿಗೆ ಒಳಪಟ್ಟಿರುವ ಪ್ರದೇಶ (ಲಕ್ಷ ಹೆಕ್ಟೇರ್‌ಗಳಲ್ಲಿ)
1	2	3	4	5	6
1.	ಕೃಷ್ಣಾ ಜಲಾನಯನ	970	757.00	472.21	14.55
2.	ಕಾವೇರಿ ಜಲಾನಯನ	425	408.00	275.61	5.91
3.	ಗೋದಾವರಿ ಜಲಾನಯನ	50	22.37	6.88	0.23
4.	ಉತ್ತರ ಪೆನ್ನಾರ್ ಜಲಾನಯನ				
5.	ದಕ್ಷಿಣ ಪೆನ್ನಾರ್ ಜಲಾನಯನ	32	27.30	26.82	0.23
6.	ಪಾಲಾರ್ ಜಲಾನಯನ				
7.	ಪಶ್ಚಿಮಕ್ಕೆ ಹರಿಯುವ ನದಿಗಳು	2000	66.95	13.20	1.05
	ಒಟ್ಟು	3477	1281.62	794.72	22.84

ವಳಬಳ್ಳಾರಿ ಮತ್ತು ಹುಡಾ ಗ್ರಾಮದ ಏತ ನೀರಾವರಿ ಯೋಜನೆ

138 (402) ಶ್ರೀ ಪಿ. ಹಂಪನಗೌಡ (ಸಿಂಧನೂರ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1993–94ನೇ ಸಾಲಿನಲ್ಲಿ ಸಿಂಧನೂರ ತಾಲ್ಲೂಕಿನಲ್ಲಿ ಬರುವ ವಳಬಳ್ಳಾರಿ ಮತ್ತು ಹುಡಾ ಗ್ರಾಮಗಳ ಏತನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇರುವುದೇ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–